2) ಬೆಂಗಳೂರು ನಗರದ ಕೇಂದ್ರ ಕಾರಾಗೃಹವನ್ನು ನಗರದ ಹೊರ ವಲಯಕ್ಕೆ ಸ್ಥಳಾಂತರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

3) ಪ್ರತಿಯೊಂದು ಜಿಲ್ಲೆಯಲ್ಲಿರುವ ಕಾರಾಗೃಹಗಳನ್ನು ಆಯಾ ಜಿಲ್ಲಾ ಸ್ಥಳದ ಹೊರವಲಯಕ್ಕೆ ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

1)-ಇಲ್ಲ

2) ನಗರದ ಹೊರವಲಯದ ಪರಪ್ಪನ ಅಗ್ರಹಾರದಲ್ಲಿ ನೂತನ ಕಾರಾಗೃಹ ನಿರ್ಮಾಣವಾಗುತ್ತಿದ್ದು ಈಗಾಗಲೇ ಭಾಗಶಃ ಕೇಂದ್ರ ಕಾರಾಗೃಹವನ್ನು ಸ್ಥಳಾಂತರಿಸಲಾಗಿದೆ

3) ಕಾರಾಗೃಹಗಳು ನ್ಯಾಯಾಲಯಗಳು ಮತ್ತು ಆಸ್ಪತ್ರೆಗಳ ಸಮೀಪದಲ್ಲಿರುವುದು ಅತ್ಯಾವಶ್ಯಕವಾಗಿದೆ. ಆದುದರಿಂದ, ಎಲ್ಲಾ ಕಾರಾಗೃಹಗಳನ್ನು ಹೊರವಲಯಕ್ಕೆ ಸ್ಥಳಾಂತರಿಸುವುದು ಸೂಕ್ತವಲ್ಲ.

ರಾಜ್ಯದಲ್ಲಿ ಏಕರೂಪದ ತೆರಿಗೆ ವಿಧಿಸುವ ಬಗ್ಗೆ

1382 (1744) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಏಕರೂಪದ ತೆರಿಗೆ ವಿಧಿಸುವುದರಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳೇನು?

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :

ಅ) ಏಕರೂಪ ತೆರಿಗೆ (ನೆಲಮಟ್ಟದ ತೆರಿಗೆ) ಯನ್ನು ಜಾರಿಗೊಳಿಸುವುದರಿಂದ ; ರಾಜ್ಯಗಳ ನಡುವೆ ದರಗಳ ಬಗ್ಗೆ ಪೈಪೋಟಿಇರುವುದಿಲ್ಲ ; ರಾಜ್ಯ ರಾಜ್ಯಗಳ ನಡುವೆ ವ್ಯಾಪಾರ : ವಾಣಿಜ್ಯ ವಹಿವಾಟಿನ ಪಲ್ಲಟ ಆಗುವುದಿಲ್ಲ ; ಪ್ರತಿಯೊಂದು ರಾಜ್ಯದ ತೆರಿಗೆ ಮೂಲಗಳು ರಕ್ಷಿಸಲ್ಪಡುತ್ತದೆ;

ಏಕರೂಪ ತೆರಿಗೆ (ನೆಲಮಟ್ಟದ ತೆರಿಗೆ) ಯನ್ನು ಜಾರಿಗೆ ತರದಿದ್ದಲ್ಲಿ ವ್ಯಾಪಾರದ ಪಲಾಯನದ ಪರಿಣಾಮ ಉಂಟಾಗಬಹುದು. ತೆರಿಗೆ ದರದ ಬಗ್ಗೆ ಪೈಪೋಟಿ ಮುಂದುವರೆದು ಯಾವುದೇ ರಾಜ್ಯಗಳ ಹಿತದೃಷ್ಟಿಗೆ ದಕ್ಕೆ ಬರಬಹುದಾಗಿದೆ.

ರಾಜ್ಯದ ಅನುಮತಿ ಪಡೆದಿರುವ ವಿದ್ಯುತ್ ಯೋಜನೆಗಳ ಸಂಖ್ಯೆ

1387 (1597) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಈವರೆಗೆ ಎಷ್ಟು ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಿದೆ? ಪ್ರಸ್ತುತ ಅವುಗಳು ಯಾವ ಹಂತದಲ್ಲಿವೆ?

ಆ) ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆ ಕುರಿತಂತೆ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮವೇನು? ಹಾಗಿದ್ದಲ್ಲಿ, ಇದು ಪ್ರಸ್ತುತ ಯಾವ ಹಂತದಲ್ಲಿದೆ?